ಅಧ್ಯಕ್ಷರು : ಈಗ ಸನ್ಮಾನ್ಯ ವಾಟಾಳ್ ನಾಗರಾಜರವರು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಾಟಾಳ್ ನಾಗರಾಜರವರು ಹೆಚ್.ಕೆ.ಡಿ.ಬಿ. ಬಗ್ಗೆ ಏನು ಹೇಳುತ್ತಾರೆ.

ಅಧ್ಯಕ್ಷರು : ಇಲ್ಲ, ಇಲ್ಲ, ಅವರದ್ದು ಹೆಚ್.ಕೆ.ಡಿ.ಬಿ.ಯದ್ದು ಅಲ್ಲ, ಬೇರೆ ವಿಷಯ.

2) ಬೆಳಗಾವಿ ನಗರಸಭೆಯು ಬೆಳಗಾವಿ ಮತ್ತು ನಿಪ್ಪಾಣಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಮಾಡಿರುವ ನಿರ್ಣಯ.

+ ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಈಗಾಗಲೇ ಮಲೆನಾಡ ಮೇಲೂ ಮಾತನಾಡ ಬೇಡಿ, ಹೆಚ್‌ಕೆಡಿಬಿ ಮೇಲೂ ಮಾತನಾಡಬೇಡಿ ಎಂದಿದ್ದಾರೆ, ಅದಕ್ಕೋಸ್ಕರ ನಾನು ಬೇರೆ ವಿಷಯದಲ್ಲಿ ಮಾತನಾಡುತ್ತಿದ್ದೇನೆ ಸ್ವಾಮಿ, ಅದಕ್ಕೇಕೆ ನೀವು ಒಂದು ರೀತಿ 'ಮಾರಿ ಕಣ್ಣು ಹೋತನ ಮೇಲೆ' ಎಂದು ಹೇಳಿದ ಹಾಗೆ ಆಡುತ್ತೀರಿ, ಇದು ಬಹಳ ಅಪಾಯ.

ಮಾನ್ಯ ಅಧ್ಯಕ್ಷರೇ, ಇವೊತ್ತು ಬಹಳ ಅತ್ಯಂತ ಗಂಭೀರವಾದಂಥ ಪರಿಸ್ಥಿತಿ ಉದ್ಭವ ವಾಗಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬೆಳಗಾವಿ ನಗರಸಭೆಯು ಬೆಳಗಾವಿ ಮತ್ತು ನಿಪ್ಪಾಣಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ನಿರ್ಣಯ ಮಾಡಿದ್ದಾರೆ. ಈ ನಗರಸಭೆ ಇರತಕ್ಕಂಥದ್ದು ಅಚ್ಚ ಕನ್ನಡದ ಕರ್ನಾಟಕದ ಭೂಮಿ ಬೆಳಗಾವಿಯಲ್ಲಿ. ಅಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಅಧಿಕಾರಕ್ಕೆ ಬಂದಿದ್ದೇವೆ ಎಂದು ಹೇಳುವ ಅಮಲಿನಲ್ಲಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಿದ್ದೇವೆಂದು ನಿರ್ಣಯ ಮಾಡಿದ್ದಾರೆ. 1990ರಲ್ಲಿಯೂ ಕೂಡ ಅದೇ ರೀತಿಯ ನಿರ್ಣಯವನ್ನು ಮಾಡಿದ್ದರು. ಅದರ ಹಿಂದೆಯೂ ಕೂಡ ಅನೇಕ ಸಾರಿ ಅವರು ಚೇಷ್ಟೆ ಆಡುತ್ತಿದ್ದರು. 1990ರಲ್ಲಿಯೇ ನಾನು ಹೇಳಿದೆ, ಬೆಳಗಾವಿ ನಗರಸಭೆಯನ್ನು ನೇರವಾಗಿ ರದ್ದು ಮಾಡಿ, ಅವರಿಗೆ ಅವಕಾಶ ಕೊಡುವುದಕ್ಕೆ ಹೋಗಬೇಡಿ ಇದೊಂದು ರೀತಿ ಅಪಾಯಕಾರಿಯಾದ ನಿರ್ಧಾರ, ನಮ್ಮ ವರ್ಗದ ಹಿತಕ್ಕೆ ಕರ್ನಾಟಕದ ಗಡಿ ಸಮಸ್ಯೆಗೆ ಸಂಬಂಧಪಟ್ಟಂತೆ ಯಾವುದೋ ಒಂದು ನಿರ್ಣಯಕ್ಕೆ ನಾವು ಬಂದಿದ್ದೇವೆ ಅದೆಲ್ಲಕ್ಕೂ ಮತ್ತು ಒಟ್ಟು ಅಭಿಪ್ರಾಯಕ್ಕೆ ಅವರು ತದ್ವಿರುದ್ಧವಾಗಿ ಮಹಾರಾಷ್ಟ್ರದ ಏಜೆಂಟರಾಗಿ ಕೆಲಸ ಮಾಡತಕ್ಕಂಥ ಆ ನಗರಸಭೆ ಏನಿದೆ ಇದನ್ನು ನಿಜವಾಗಿಯೂ ಈ ರೀತಿಯ ನಿರ್ಣಯ ಮಾಡಿದ ತಕ್ಷಣವೇ ಸರ್ಕಾರ ವಜಾ ಮಾಡಬೇಕಾಗಿತ್ತು. ನನಗೆ ಅನ್ನಿಸುತ್ತದೆ, ಪ್ರಜ್ಞಾಹೀನ ಸ್ಥಿತಿಯಲ್ಲಿ ಸರ್ಕಾರ ಇದೆ. ಈ ನಿರ್ಣಯ ಆಗಿರತಕ್ಕಂಥದ್ದು ಬಹುಶಃ ಸರ್ಕಾರಕ್ಕೆ ಗೊತ್ತಿಲ್ಲವೇನೋ ಎಂದು ನಾನು ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಲ್ಲಿ ಸರ್ಕಾರಕ್ಕೆ ಕೇಳುತ್ತೇನೆ, ಸರ್ಕಾರದವರು ನಾವೇನು ಷಂಡರಲ್ಲ, ನಾವು ಬಹಳ ಶಕ್ತಿಯುತರು ಎಂದು ಪ್ರತಿಯೊಂದು ಸಾರಿಯೂ ಹೇಳುತ್ತಿರುತ್ತಾರೆ, ಇವೊತ್ತು ಹೆಚ್ಚುಕಡಿಮೆ ಈ ನಿರ್ಣಯವಾಗಿ ಒಂದು ದಿನ ಕಳೆದಿದೆ. ನೇರವಾಗಿ ಸರ್ಕಾರ ಇಷ್ಟು ಹೊತ್ತಿಗೆ ನಗರಸಭೆಯನ್ನು ರದ್ದುಮಾಡಿ, ವಜಾ ಮಾಡಿ ಕ್ರಮ ಕೈಗೊಳ್ಳಬೇಕಾಗಿತ್ತು. ಆದರೆ ಈ ಕ್ಷಣದವರೆಗೂ ಕೂಡ ಸರ್ಕಾರ ಇದರ ಬಗ್ಗೆ ಗಮನವನ್ನು ಹರಿಸಲಿಲ್ಲ. ಇದು ನಿಜಕ್ಕೂ ಬಹಳ ಅಪಾಯಕಾರಿಯಾದಂಥ

ಒಂದು ನಿರ್ಧಾರ. ಸ್ವಾಮಿ ನಾನು ಹೇಳುತ್ತಿದ್ದೇನೆ; ಹಿಂದೆ ಅಲ್ಲಿರತಕ್ಕಂಥ ನಗರಸಭೆ ಮೇಲೆ ಮರಾಠಿ ಧ್ವಜವನ್ನು ಹಾಕಿದ್ದಾರೆ, ಸಾಮಾನ್ಯವಾಗಿ ಸರ್ಕಾರೀ ಕಟ್ಟಡದ ಮೇಲಾಗಲೀ, ಪುರಸಭೆ ಮೇಲಾಗಲೀ, ನಗರಪಾಲಿಕೆ ಮೇಲಾಗಲೀ ರಾಷ್ಟ್ರಧ್ವಜ ಇರಬೇಕೇ ಹೊರತು ಯಾವುದೇ ಒಂದು ಭಾಷೆಯ, ಪಕ್ಷದ ಧ್ವಜ ಇರಬಾರದು. ಈ ಮರಾಠಿ ಧ್ವಜವನ್ನು ತೆಗೆಯಬೇಕು ಎಂದು ಹೇಳಿ ಸನ್ಮಾನ್ಯ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಯಾಗಿದ್ದಾಗ ಇಲ್ಲಿ ಧರಣಿ ಆಯಿತು, ಒತ್ತಡ ಹೇರಲಾಯಿತು ಆಗ ಅವರು ತೆಗೆಯುತ್ತೇವೆಂದು ಹೇಳಿದರು, ಆದರೆ ಇಲ್ಲಿಯವರೆಗೆ ತೆಗೆದಿಲ್ಲ, ಒಂದು ಕಡೆ ಆ ಪರಿಸ್ಥಿತಿ ಇದ್ದರೆ ಮತ್ತೊಂದು ಕಡೆ ಬೆಳಗಾವಿ ನಗರಸಭೆ ಸ್ವೇಚ್ಛೆಯಾಗಿ ತಮ್ಮ ಇಚ್ಛಾನುಸಾರ ಅವರು ನಡೆಯುತ್ತಿದ್ದಾರೆ. ಈ ಕೂಡಲೇ ನಗರಸಭೆಯನ್ನು ರದ್ದು ಮಾಡತಕ್ಕಂಥ ಭರವಸೆಯನ್ನು ಕೂಡಲೇ ಸರ್ಕಾರ ಕೊಡಬೇಕು. ಈ ಕೂಡಲೇ ಈ ಸಂಬಂಧ ಆದೇಶವನ್ನು ಹೊರಡಿಸಬೇಕು. ಇಲ್ಲದಿದ್ದರೆ ಸರ್ಕಾರ ಸತ್ತು ಹೋಗಿದೆ, ಸರ್ಕಾರಕ್ಕೆ ನಿಜವಾಗಿಯೂ ಜೀವವಿಲ್ಲ, ಸರ್ಕಾರ ಬದುಕಿದೆ, ಎಂದು ಹೇಳುವುದಕ್ಕೆ ಯಾವುದೇ ಒಂದು ಆಧಾರಗಳು ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ನೇರವಾಗಿ ಹೇಳುತ್ತಿದ್ದೇನೆ. ಇದು ಬಹಳ ಅತ್ಯಂತ ಸೂಕ್ಷ್ಮವಾದಂಥ ಪರಿಸ್ಥಿತಿ. ಇಂಥ ಪರಿಸ್ಥಿತಿಯಲ್ಲಿ ಅವರು ರಾಜಾರೋಷವಾಗಿ ಅವರ ಇಚ್ಛಾನುಸಾರ ನಡೆಯುವುದಾದರೆ, ಬೆಳಗಾವಿ ಪರಿಸ್ಥಿತಿ ಏನು? ಬೆಳಗಾವಿಯಲ್ಲಿ ಈ ರೀತಿಯಾದಂಥ ವಿಚಾರ ನಡೆದರೆ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ತಮ್ಮ ಹಠಕ್ಕಾಗಿ, ಅವರ ಓಟಿಗಾಗಿ, ನಮ್ಮ ರಾಜಾಕಾರಣಕ್ಕಾಗಿ, ನಮ್ಮ ಹಿತವನ್ನು ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಕೂಡ ಬಲಿ ಕೊಡುತ್ತಿದ್ದಾರೆ. ಇದು ಒಳ್ಳೆಯ ನೀತಿಯಲ್ಲ. ಮಾನ್ಯ ಮುಖ್ಯಮಂತ್ರಿಗಳು ಈದೀಗ ಬಂದಿದ್ದಾರೆ, ಅವರಿಗೆ ತಮ್ಮ ಮೂಲಕ ನಾನು ನೇರವಾಗಿ ಈ ವಿಚಾರದಲ್ಲಿ ಅವರ ಗಮನವನ್ನು ಸೆಳೆಯುತ್ತಿದ್ದೇನೆ. ಅವರು ನೇರವಾಗಿ ಹೇಳಬೇಕು, ಅದನ್ನು ಬಿಟ್ಟು ಸುಮ್ಮನೆ ನಾಳೆ ನೋಡುತ್ತೇನೆ, ಅಲ್ಲಿಂದ ನಿರ್ಣಯ ಬಂದಮೇಲೆ ನೋಡೋಣ ಎನ್ನುವ ಉತ್ತರ ಅವರಿಂದ ನಮಗೆ ಬೇಕಾಗಿಲ್ಲ. ಪತ್ರಿಕೆಯಲ್ಲಿ ಈ ವಿಚಾರ ಈಗಾಗಲೇ ಬಂದಾಗಿದೆ. ಬೆಳಗಾವಿಯನ್ನು ಮತ್ತು ನಿಪ್ಪಾಣಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಿದ್ದೇವೆ ಎಂದು ನಿರ್ಣಯ ಮಾಡಿ ಹೇಳಿದ್ದಾರೆ. ನೇರವಾಗಿ ಅವರು ಕರ್ನಾಟಕಕ್ಕೆ ಸೇರಿದ ಬೆಳಗಾವಿ, ನಿಪ್ಪಾಣಿ ಪ್ರದೇಶವನ್ನೆಲ್ಲಾ ಮಹಾರಾಷ್ಟ್ರಕ್ಕೆ ಸೇರಿಸಿದ್ದೇವೆ ಎನ್ನುವಂತಹ ನಿರ್ಣಯವನ್ನು ಮಾಡಿದ್ದಾರೆ. ಆದುದರಿಂದ ಈ ಸರ್ಕಾರ ಈ ಬಗ್ಗೆ ಸ್ಪಷ್ಟ ನಿಲುವನ್ನು ಕೊಡಬೇಕು ಎಂದು ತಮ್ಮಲ್ಲಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ಅಲ್ಲಿ ರೆಸಲ್ಯೂಷನ್ ಮಾಡಿದ್ದಾರೆ, ಅದರ ಬಗ್ಗೆ ತಾವು ಉತ್ತರ ಕೊಡಿ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸತ್ತು ಹೋಗಿರುವ ಸರ್ಕಾರ ಉತ್ತರ ಏನು ಹೇಳಬೇಕು? ಜೀವವಿರುವ ಸರ್ಕಾರ ಬಂದಾಗ ಉತ್ತರ ಕೇಳಲಿ.

ಶ್ರೀ ವಾಟಾಳ್ ನಾಗರಾಜ್ : ಸತ್ತು ಹೋಗಿರುವ ಸರ್ಕಾರ ಎಂದು ಹೇಳಲೇಬೇಕಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಅದಾದಮೇಲೆ ಕುಳಿತುಕೊಳ್ಳಿ ಅಷ್ಟೇ. ಮಹಾರಾಷ್ಟ್ರಕ್ಕೆ ಬೆಳಗಾಂ ಹೋಗುವುದನ್ನು ನಿಮ್ಮ ಭಾಷೆಯಿಂದ ಉಳಿಸಬೇಕಾಗಿಲ್ಲ. ನಮಗೂ ಪರಿಜ್ಞಾನ ಇದೆ. ಪದ ಪ್ರಯೋಗ ಮಾಡುವುದಕ್ಕೆ ಒಂದು ಇತಿಮಿತಿ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಮಗೆ ಪರಿಜ್ಞಾನ ಇಲ್ಲ ಎಂದು ಹೇಳಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ದುರಂಹಕಾರದ ಉತ್ತರವನ್ನು ಕೇಳುವುದಕ್ಕೆ ನಾವು ತಯಾರಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಬದುಕಿಲ್ಲ ಎಂದು ಹೇಳಿದೆ.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಇಡೀ ಸದನವನ್ನು ಗುತ್ತಿಗೆ ಕೊಟ್ಟಿಲ್ಲ ಅವರಿಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳ ಈ ರೀತಿಯ ಧೋರಣೆ ಸರಿಯಿಲ್ಲ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ನೀವು ವಿಷಯ ಹೇಳಿ, ಆದರೆ ಸತ್ತಿಲ್ಲವೇ ಎಂದು ಹೇಳಿದರೆ ಅದು ಚೆನ್ನಾಗಿರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಒಂದಲ್ಲ ಮೂರು ಬಾರಿ ಹೇಳುತ್ತೇನೆ, ಸರ್ಕಾರ ಸತ್ತಿದೆ ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನು ನೀವು ಒಳಗಡೆ ಬಂದು ಒಂದು ನಿಮಿಷವಾಗಿಲ್ಲ ನೀವು ಶಾಂತವಾಗಿ, ಸಮಾಧಾನವಾಗಿ ಮಾತನಾಡಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾನು ನಿಮ್ಮನ್ನು ಕೇಳುತ್ತೇನೆ, ಮಾನ್ಯ ವಾಟಾಳ್ ನಾಗರಾಜರವರು ಹೇಳಿದ್ದುದು ಅನ್ ಪಾರ್ಲಿಮೆಂಟರಿ ಪದ ಆಗಿದ್ದರೆ ಅದನ್ನು ತೆಗೆದುಹಾಕಿ. ಆದರೆ ಹೆದರಿಸಬೇಡಿ.

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ಪಾರ್ಲಿಮೆಂಟರಿ, ಅನ್ ಪಾರ್ಲಿಮೆಂಟರಿ ಭಾಷೆಯ ಬಗ್ಗೆ ನಮಗೆ ಅವರಿಂದ ಉಪದೇಶ ಬೇಕಾಗಿಲ್ಲ. ನಾನೇನು ಅವರನ್ನು ಹೆದರಿಸಲಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಸಭಾನಾಯಕರಿಗೆ ಸಮಾಧಾನವಿರಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ನಾವು ಸಮಾಧಾನವನ್ನೇನೂ ಕಲಿತುಕೊಳ್ಳಬೇಕಾಗಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಆವೇಶದಲ್ಲಿ ಅನೇಕ ಪದಗಳನ್ನು ಉಪಯೋಗ ಮಾಡುತ್ತೇವೆ. ನಿಮಗೆ ಗೊತ್ತಿದೆ, ಈ ಸದನದಲ್ಲಿ ಎಷ್ಟು ಜನ ಎಂತೆಂಥ ಪದಗಳನ್ನು ಉಪಯೋಗ ಮಾಡಿ ಕುಸ್ತಿಗೆ ನಿಂತಿದ್ದಾರೆ, ಚಡ್ಡಿ ಏರಿಸಿದ್ದಾರೆ, ಧೋತರ ಏರಿಸಿದ್ದಾರೆ ಅದೆಲ್ಲಾ ನೋಡಿದ್ದೇವೆ. ಸದಸ್ಯರು ಹೀಗೆ ಹೇಳಿದರು ಎಂದು ಏಕದಂ ಮುಖ್ಯಮಂತ್ರಿಗಳು ಸರ್ಕಾರ ಸತ್ತಿದೆ, ಆಯಿತು, ಉತ್ತರ ಸಿಕ್ಕುವುದಿಲ್ಲ ಎಂದರೆ ಹೇಗೆ? ಇಂತಹ ಪದಗಳನ್ನು ಯಾರೂ ಉಪಯೋಗ ಮಾಡುವುದಿಲ್ಲವೇ? ಇದು ಅನ್‌ಪಾರ್ಲಿಮೆಂಟರಿ ಪದವೇ?

ಅಧ್ಯಕ್ಷರು : ಅವರು ಸರ್ಕಾರ ಸತ್ತಿದೆ ಎಂದರೆ ಅದು ಅನ್ ಪಾರ್ಲಿಮೆಂಟರಿ ಆಗುವುದಿಲ್ಲ. ಸರ್ಕಾರ ಸತ್ತಿರುವುದರಿಂದ ಉತ್ತರ ಕೊಡುವುದಕ್ಕಾಗುವುದಿಲ್ಲ, ಜೀವಂತಹ ಸರ್ಕಾರ ಬಂದಾಗ ಕೇಳಿ ಎಂದಿದ್ದು ಸಹ ಅನ್ ಪಾರ್ಲಿಮೆಂಟರಿ ಅಲ್ಲ. ಮಾನ್ಯ ಸದಸ್ಯರುಗಳು ತಮ್ಮತಮ್ಮ ಭಾವನೆಗಳನ್ನು ವ್ಯಕ್ತ ಪಡಿಸುವುದಕ್ಕೆ ನಿಮಗೆ ಸ್ವಾತಂತ್ರ್ಯ ಇದೆ. ಅದಕ್ಕೆ ಯಾರೂ ಅಡ್ಡಿ ಪಡಿಸುವುದಿಲ್ಲ. ಸ್ವಲ್ಪ ಎಲ್ಲೋ ಒಂದು ಕಡೆ ಇನ್ನೊಬ್ಬರ ಮನಸ್ಸನ್ನು ಚುಚ್ಚುವ ಹಾಗೆ ಆಗಾಗ ಅವರೂ ಕೂಡ ಮನುಷ್ಯರೇ. ಅದೇ ತೀವ್ರತೆಯಲ್ಲಿ ಪ್ರತಿಕ್ರಿಯೆ ಬರುತ್ತದೆ. ಆದುದರಿಂದ ಈ ರೀತಿಯ ವಾತಾವರಣ ಉಂಟಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ಯಾವ ಭಾಷೆ ಉಪಯೋಗಿಸಬೇಕೆಂದು ಬರೆದುಕೊಡುವುದಕ್ಕೆ ಹೇಳಿ, ಅದೇ ಭಾಷೆಯನ್ನು ನಾವು ಉಪಯೋಗಿಸುತ್ತೇವೆ. ನಿಮ್ಮ ಸರ್ಕಾರ ಜನರ ದೃಷ್ಟಿಯಿಂದ ಬದುಕಿದ್ದು ಸತ್ತಂತಾಗಿದೆ, ನಿಮ್ಮ ಆಡಳಿತ ವೈಖರಿ ನೋಡಿದರೆ ನಮಗೆ ಆ ಭಾವನೆ ಬಂದಿದೆ ಎಂದು ನಾವು ಹೇಳುತ್ತೇವೆ ಎಂದಾಗ ಆ ಮಾತನ್ನು, ಆ ಶಬ್ದವನ್ನು ಉಪಯೋಗಿಸಬಾರದು ಎಂದರೆ ನೀವು ವಾಪಸ್ಸು ತೆಗೆಸಿ. ಆದರೆ ಅವರಿಗೇನು ಗುತ್ತಿಗೆ ಕೊಟ್ಟಿಲ್ಲ ಎಂದರೆ ಏನು? ಮಾನ್ಯ ಅಧ್ಯಕ್ಷರೇ, ನಾವು ನಿಮ್ಮ ಪರ್ಮಿಷನ್ ತೆಗೆದುಕೊಂಡು ಮಾತನಾಡುವುದಕ್ಕೆ ಎದ್ದೇಳುತ್ತೇವೆ, ಅವರ ಪರ್ಮಿಷನ್ ತೆಗೆದುಕೊಂಡು ಅಲ್ಲ. ಪ್ರತಿಯೊಬ್ಬ ಸದಸ್ಯರಿಗೂ ಅವರದೇ ಆದ ಅಭಿಪ್ರಾಯಗಳನ್ನು ವ್ಯಕ್ತಿಪಡಿಸುವುದಕ್ಕೆ ಅವಕಾಶವಿದೆ. ತಾವು ನಮ್ಮ ರಕ್ಷಣೆಗೆ ಬರಬೇಕು. ಇವತ್ತು ನಡೆದಿರುವಂತಹ ಘಟನೆಯಿಂದ ನಾವು ವಿರೋಧಪಕ್ಷದಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನನ್ನ ಅಂಕುಶದಲ್ಲಿ ಕೆಲಸ ಮಾಡಬೇಕು ಎನ್ನುವಂತಹ ನಡವಳಿಕೆಯನ್ನು ನಾವು ಮುಖ್ಯಮಂತ್ರಿಗಳಿಂದ ನಿರೀಕ್ಷೆ ಮಾಡಿಲ್ಲ. ಈ ರೀತಿಯಾದರೆ ಇದು ಆಗುವುದಿಲ್ಲ.

ಅಧ್ಯಕ್ಷರು : ಸಭೆಯನ್ನು ನಡೆಸತಕ್ಕಂಥ ಅಧಿಕಾರವನ್ನು ನಾನು ಪಡೆದುಕೊಂಡಿದ್ದೇನೆ. ಇಲ್ಲಿ ಯಾರನ್ನು ಯಾರೂ ನಿಗ್ರಹಿಸುವುದಕ್ಕೆ ಅವಕಾಶವಿಲ್ಲ. ತಾವು ಸರ್ಕಾರದ ಬಗ್ಗೆ ಏನು ಪದಗಳನ್ನು ಬಳಸಬೇಕು ಎಂದು ಬರೆದುಕೊಡಿ ಎಂದು ಹೇಳಿದಿರಿ, ಅದನ್ನು ಬರೆದು ಕೊಡುವುದಕ್ಕೆ ಯಾರೂ ತಯಾರಾಗಿಲ್ಲ. ಎಲ್ಲರೂ ಅರ್ಹತೆಯನ್ನು ಪಡೆದುಕೊಂಡೇ ಈ ಸದನವನ್ನು ಪ್ರವೇಶ ಮಾಡಿದ್ದಾರೆ.

ತಾವು ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ ಕೆಲವು ಮಾತುಗಳನ್ನು ಆಡಿದಾಗ, ಕೆಲವು ಮಾತುಗಳನ್ನು ಆಡಿಸಿಕೊಳ್ಳುವುದಕ್ಕೂ ತಯಾರಿರಬೇಕು. ಆದುದರಿಂದ ಕ್ರಿಯೆಯೆ ಪ್ರತಿಕ್ರಿಯೆ ಎಂದು ಬರುತ್ತದೆ. According to Newton's law, action and reaction are equal and opposite. ತಾವು ಯಾವ ಪ್ರಮಾಣದಲ್ಲಿ ಪ್ರತಿಕ್ರಿಯೆ ತೋರಿಸುತ್ತೀರಿ ಅದೇ ಪ್ರಮಾಣದಲ್ಲಿ ಮಾರುತ್ತ ಕೂಡ ಬರುತ್ತದೆ. ಅದಕ್ಕೆ ತಾವು ಯಾರೂ ಕೂಡ ಆ ರೀತಿಯ ಸನ್ನಿವೇಶ ಬರುವುದು ಬೇಡ ಎನ್ನುವುದಾದರೆ ತಮ್ಮ ಬಳಸತಕ್ಕಂಥ ಭಾಷೆ ಬಗ್ಗೆ ಎಚ್ಚರಿಕೆಯಿಂದ ಇದ್ದರೆ ಅವರೂ ಕೂಡ ಎಚ್ಚರಿಕೆಯಿಂದ ಇರುತ್ತಾರೆ. ಇದಕ್ಕಿಂತ ಹೆಚ್ಚು ನಾನು ಹೇಳುವುದಿಲ್ಲ. ಈ ವಿಷಯ ರಾಜ್ಯಕ್ಕೆ ಸಂಬಂಧಿಸಿದ ಗಂಭೀರವಾದಂತಹ ವಿಷಯವಾಗಿರುವುದರಿಂದ ರಾಜ್ಯದ ಹಿತದೃಷ್ಟಿಯಿಂದ ತಾವು ಆಡಳಿತ ಹೊಣೆ ಹೊತ್ತಿರತಕ್ಕಂಥವರು ಒಂದು ಸಮಂಜಸವಾದ ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ನಾನು ತಮಗೆ ವಿನಂತಿ ಮಾಡುವುದಿಷ್ಟೇ, ಈ ಸದನದಲ್ಲಿ ಕಾರ್ಯಕಲಾಪ ನಡೆಯುವಾಗ ನಮಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ಅವರಿಗೂ ಸಹ ಇದೆ. ನಿನ್ನೆ ಒಂದು ರೆಸಲ್ಯೂಷನ್ ಆದರೆ 24 ಗಂಟೆಯೊಳಗೆ ಆ ಕಾರ್ಪೋರೇಷನ್ ಸಸ್ಪೆಂಡ್ ಮಾಡಬೇಕಾಗಿತ್ತು ಎಂದು ಹೇಳಿದರೆ ಯಾರು ಸರ್ಕಾರಗಳು ನಡೆಸತಕ್ಕಂಥವರು 24 ಗಂಟೆಯೊಳಗೆ ; ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಆಗುವುದಿಲ್ಲ ಎಂದು ಹೇಳಿ, ನಮ್ಮ ಒತ್ತಾಯ ಇರಬಹುದು. ನಾನು ಈಗಲೇ ಮಾಡಬೇಕು ಎಂದು ಹೇಳುತ್ತೇನೆ, ನೀವು ಆಗುವುದಿಲ್ಲ ಎಂದು ಹೇಳಿ. ಆದರೆ ನೀವು ಬೆದರಿಕೆ ಹಾಕಿದರೆ ನಾವು ಇಲ್ಲಿ ಇರುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ತಮಗೆ ಏನೆಲ್ಲಾ ಹೇಳಬೇಕಾಗಿತ್ತು ಅದನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೆ. ಈಗ ಅವರ ಸರದಿ ಬಂದಿದೆ. ಅವರು ಉತ್ತರ ಕೊಡಲಿ. ಮತ್ತೆ ದಯಮಾಡಿ ನಾನು ತಮ್ಮನ್ನು ಕರೆಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ನಾನು ಏನು ಪ್ರಶ್ನೆ ಕೇಳುತ್ತೇನೆ ಅದಕ್ಕೆ ಅಷ್ಟೇ ಸೌಜನ್ಯವಾಗಿ ಸರ್ಕಾರ ಉತ್ತರ ಕೊಡಲಿ. ಆದರೆ ಅವರು ಬೆದರಿಕೆ ಧಾಟಿಯಲ್ಲಿ ಉತ್ತರ ಕೊಡುವುದಾದರೆ ....

(ಗೊಂದಲ)

ಅಧ್ಯಕ್ಷರು : ಎಲ್ಲಾ ಸದಸ್ಯರಲ್ಲಿ ಹೇಳುವುದೇನೆಂದರೆ ಸಭಾನಾಯಕರು ಮತ್ತು ಪ್ರತಿಪಕ್ಷದ ನಾಯಕರು ಏನಿದ್ದಾರೆ ಅವರು ಮಾತನಾಡುವಾಗ ಒಂದು ಗೌರವ ಕಾರಣದಿಂದ ಬೇರೆ ಯಾರೂ ಮಧ್ಯೆ ಎದ್ದು ನಿಲ್ಲಬಾರದು.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜರವರು ಧಿಕ್ಕಾರ ಕೂಗಲಿ, ಕಪ್ಪು ಭಾವುಟ ಹಾರಿಸಲಿ, ಮೊದಲಿನಿಂದಲೂ ಅವರದು, ನನ್ನದು ಹಳೆಯ ಪರಿಚಯ ಇದೆ. ನಾನು ಹೊಸಬನಲ್ಲ. ಅವರು ಇದೇ ರೀತಿ ನಡೆದುಕೊಂಡು ಹೋದರೆ ಸಭೆಗೆ ಗೌರವ, ಘನತೆ ಬರುತ್ತದೆ ಎಂದು ತಿಳಿದುಕೊಂಡಿದ್ದಾರೆ. ಧಿಕ್ಕಾರ ಕೂಗಲಿ, ಕಪ್ಪುಭಾವುಟ ಹಾರಿಸುವುದಕ್ಕೆ ಅನುಮತಿ ಕೊಟ್ಟರೆ ನಮ್ಮಗೇನೂ ತಕರಾರಿಲ್ಲ. ಆದರೆ ಒಂದು ಮಾತು ಹೇಳುತ್ತೇನೆ, ಅವರಿಗೆ ಎಷ್ಟು ಕಳಕಳಿ ಬೆಳಗಾಂ ಮತ್ತ ನಿಪ್ಪಾಣಿ ಅನ್ನು ಉಳಿಸಿಕೊಳ್ಳುವುದಕ್ಕೆ ಇದೆಯೋ, ಅದೇರೀತಿ ಸರ್ಕಾರದಲ್ಲಿ ಇರತಕ್ಕಂಥ ಯಾವ ಭಾಗದ ಸದಸ್ಯರಿಗೂ ಅವರಿಗಿಂತ ಕಡಿಮೆ ಕಾಳಜಿ ಇಲ್ಲ ಎಂದು ನಾನು ನಮ್ರತೆಯಿಂದ ಹೇಳುತ್ತೇನೆ. ಅವರೊಬ್ಬರಿಗೆ ಅಲ್ಲ, ಎಲ್ಲರಿಗೂ ಇದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಕಾಳಜಿ ಇಲ್ಲ ಎಂದು ಹೇಳಿದೇನೇ? ವಿನಾಕಾರಣ ನೀವು ಅಪಾದನೆ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಆ ಪದ ಬಳಸಿಲ್ಲ, ನಿಮಗೆ ಕಾಳಜಿ ಇಲ್ಲ ಎಂದು ಹೇಳಿಲ್ಲವಲ್ಲ. ನಾನು ಹಾಗೇ ಹೇಳಿದ್ದೇನೋ?

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜರವರೇ, ತಾವು ಹೇಗೆ ಸ್ವತಂತ್ರ್ಯವಾಗಿ, ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡುವುದಕ್ಕೆ ಅವಕಾಶ ಇದೆಯೋ, ಅಷ್ಟೇ ಹಕ್ಕು ಅವರಲ್ಲಿ ಕೂಡ ಸ್ಥಾಪಿತವಾಗಿರುವುದರಿಂದ ಅವರ ಅಭಿಪ್ರಾಯವನ್ನು ವ್ಯಕ್ತ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ತಾವು ಮಧ್ಯೆ ನಿಲ್ಲುತಕ್ಕದ್ದು ಒಳ್ಳೆಯದಲ್ಲ. ದಯಮಾಡಿ ಸಹಕರಿಸಿ. ನೀವು ಹೇಗೆ ಭಾಷೆ ಬಳಸುತ್ತೀರೋ, ಅವರು ಅವರದೇ ಆದಂತಹ ರೀತಿಯಲ್ಲಿ.....

ಶ್ರೀ ವಾಟಾಳ್ ನಾಗರಾಜ್ : ಯಾವ ಭಾಷೆ ಸ್ವಾಮಿ ನಾವು ಬಳಸಿರುವುದು. ತಾವು ಹೇಳಿದಿರಿ ನೀವು ಯಾವ ಭಾಷೆಯನ್ನು ಬಳಸುತ್ತೀರಿ ಎಂದು, ನಾನು ಯಾವ ಭಾಷೆಯನ್ನು ಬಳಸಿದ್ದೇನೆ.

ಅಧ್ಯಕ್ಷರು : ನಾನು ಅದನ್ನೇ ಹೇಳುತ್ತಿರುವುದು, ನೀವು ಎಷ್ಟು ತೀವ್ರತೆಯಿಂದ ನಿಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತೀರೋ ಅದೇರೀತಿ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಾರೆ. ಅದಕ್ಕೆ ತಾವು ಅವಕಾಶ ಕೊಡಬೇಕು. ಮಧ್ಯದಲ್ಲಿ ತಾವು ದಯಮಾಡಿ ತೊಂದರೆ ಮಾಡಬೇಡಿ. ನೀವು ಮಾತನಾಡಬೇಕಾದರೆ ಅವರು ಎದ್ದಿದ್ದರೇ? ತಾಳ್ಮೆಯಿಂದ ಕುಳಿತಿದ್ದರು. ಆ ಕನಿಷ್ಟ ಸೌಜನ್ಯವನ್ನಾದರೂ ತೋರಿಸಬೇಕು. ತಾವು ಹಿರಿಯ ಸದಸ್ಯರಿದ್ದೀರಿ. ತಾವು ದಯಮಾಡಿ ಸಹಕರಿಸಬೇಕು. ಮುಖ್ಯಮಂತ್ರಿಗಳು ಅವರ ಅಭಿಪ್ರಾಯವನ್ನು ವ್ಯಕ್ತಮಾಡಲಿ.

ಶ್ರೀ ಹೆಚ್.ಡಿ. ದೇವೇಗೌಡ : ಈ ಸದನದಲ್ಲಿ ಇರತಕ್ಕಂಥ ಯಾವ ಕಡೆಯ ಸದಸ್ಯರಿಗೂ ಅವರಿಗಿಂತ ಕಡಿಮೆ ಕಾಳಜಿ ಇಲ್ಲ ಎಂದು ನಾನು ಹೇಳಿದೆ. ಇಲ್ಲಿ ಇರತಕ್ಕಂಥ 224 ಜನ ಸದಸ್ಯರ ಪೈಕಿ ಅವರನ್ನು ಬಿಟ್ಟರೆ 223 ಜನ ಸದಸ್ಯರು ಹಾಗೂ ಎಂ.ಇ.ಎಸ್. ಪಕ್ಷದ 3 ಜನ ಸದಸ್ಯರನ್ನು ಬಿಟ್ಟರೆ

ಬಾಕಿ ಎಲ್ಲಾ ಸದಸ್ಯರಿಗೂ ಕೂಡ ಬೆಳಗಾಂ, ನಿಪ್ಪಾಣಿಯನ್ನು ಉಳಿಸಿಕೊಳ್ಳುವುದಕ್ಕೆ ಯಾರಿಗೇನು ಕಡಿಮೆ ಆಸಕ್ತಿ ಇದೆ ಎಂದು ಅವರು ಭಾವಿಸಿಕೊಳ್ಳಬೇಕಾಗಿಲ್ಲ. ನಾನು ಇಷ್ಟೇ ಹೇಳುತ್ತೇನೆ, ನಿನ್ನೆ ರೆಸಲ್ಯೂಷನ್ ಮಾಡಿದ್ದಾರೆ, ಅದರ ಬಗ್ಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನೋಡಿ ಸ್ವಾಮಿ ನಾನು ಹೇಳುತ್ತೇನೆ, ಈ ಉತ್ತರದಿಂದ ನನಗೇನು ಅಷ್ಟು ಸಂತೋಶ ಏನಿಲ್ಲ. ನಾನು ತಮಗೆ ಹೇಳುತ್ತಿದ್ದೇನೆ, ಸರ್ಕಾರದ ನಿರ್ಧಾರ ಸರಿಯಲ್ಲ, ಆದ್ದರಿಂದ ಈ ನಿರುತ್ಸಾಹ, ನಿಸ್ತೇಜವಾದ ಉತ್ತರಕ್ಕೆ ನಾನು ಪ್ರತಿಭಟನೆಯನ್ನು ಸಲ್ಲಿಸುತ್ತಿದ್ದೇನೆ. ಈ ಸರ್ಕಾರದ ನಿರ್ಧಾರವನ್ನು ವಿರೋಧಿಸುತ್ತೇನೆ. ನಾನು ಕಪ್ಪುಬಾವುಟವನ್ನು ಪ್ರದರ್ಶನ ಮಾಡುತ್ತೇನೆ. ಈ ಸದನದಲ್ಲಿ ನಾನು ಧರಣಿ ಮಾಡುತ್ತೇನೆ. ಈ ಸದನದಲ್ಲಿ ಧರಣಿ ಕುಳಿತುಕೊಳ್ಳುತ್ತೇನೆ. ಸರ್ಕಾರಕ್ಕೆ ಯಾವುದೇ ಗಜಿಯ ಬ್ಗಗೆ ಯಾವುದೇ ಅಭಿಮಾನ ಇಲ್ಲ ಎಂದು ನೇರವಾಗಿ ಹೇಳುತ್ತೇನೆ....

(ಈ ಹಂತದಲ್ಲಿ ಮಾನ್ಯ ಸದ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಪ್ರತಿಭಟನಾ ಸೂಚಕವಾಗಿ ಸದನದಲ್ಲಿ ಕಪ್ಪುಬಾವುಟವನ್ನು ಪ್ರದರ್ಶಿಸಿದರು.)

... ನಾನು ಹೇಳುತ್ತೇನೆ. ಈ ಸರ್ಕಾರಕ್ಕೆ ಗಡಿಯ ಬಗ್ಗೆ ಯಾವುದೇ ಅಭಿಮಾನ ಇಲ್ಲ, ಗಡಿಯ ಬಗ್ಗೆ ಸರ್ಕಾರಕ್ಕೆ ಚಿಂತನೆ ಇಲ್ಲ, ನೀವು ಏನು ಬೇಕಾದರೂ ಮಾಡಿ, ನಿಮಗೆ ಸ್ವಲ್ಪವೂ ನಿಯತ್ತಿಲ್ಲ, ನಿಮ್ಮ ಸರ್ಕಾರ ಸತ್ತಿದೆ, ಅದರಲ್ಲಿ ಬೇರೆ ಮಾತೇ ಇಲ್ಲ. ನಾನು ಈ ಸರ್ಕಾರದ ನೀತಿಯನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತಿದ್ದೇನೆ....

(ಈ ಹಂತದಲ್ಲಿ ಕನ್ನಡ ಚಳುವಳಿ ವಾಟಾಳ್ ಪಕ್ಷದ ಅಧ್ಯಕ್ಷರಾದ ಶ್ರೀ ವಾಟಾಳ್ ನಾಗರಾಜ್‌ರವರು ಸರ್ಕಾರದ ನೀತಿಯನ್ನು ವಿರೋಧಿಸಿ ಸಭಾತ್ಯಾಗ ಮಾಡಿದರು.)

ಶ್ರೀ ಹೆಚ್.ಡಿ. ದೇವೇಗೌಡ : ಅವರು ಹಿಂದೆ ಎಲ್ಲ ನಾಲ್ಕು ವರ್ಷ ಆಡಿದ ಆಟ ಈಗ ನಡೆಯುವುದಿಲ್ಲ ಎಂದು ತಿಳಿದುಕೊಳ್ಳಬೇಕು. ಏನು ಮಾಡಬೇಕೆಂಬುದು ನನಗೆ ಗೊತ್ತಿದೆ.

ಅಧ್ಯಕ್ಷರು : ತಾವು ನಾಲ್ಕು ಜನ ಒಂದೇ ವಿಷಯದ ಮೇಲೆ ಮಾತನಾಡುವುದಾಗಿ ತಿಳಿಸಿದ್ದೀರಿ, ಮಾಳಗಿ, ಚಂದ್ರಶೇಖರ್ ನಾಯಕ್, ವದ್ದರ್ ಮತ್ತು ಸುಭಾಷ್ ಜೋಶಿಯವರು ಈ ಬಗ್ಗೆ ಯಾರಾದರು ಒಬ್ಬರು ಅಥವಾ ಇಬ್ಬರು ಪ್ರಸ್ತಾಪ ಮಾಡಿ. Alright. There are new members. Nothing derogatory. Why do you get agitated? You should understand it according to circumstances. Don't interpret the words as they are.

ಶ್ರೀ ಎಸ್.ಸಿ. ಮಾಳಗಿ : ಮಾನ್ಯ ಅಧ್ಯಕ್ಷರೆ, ಬೆಳಗಾವಿ ತಾಲ್ಲೂಕು ಹುಚ್ಚಗಾವ್‌ನಿಂದ ಸತತವಾಗಿ ಎಂ.ಇ.ಎಸ್. ಆರಿಸಿಬರುತ್ತಿತ್ತು. ನಿಪ್ಪಾಣಿಯಿಂದ ನಮ್ಮಸುಭಾಶ್ ಜೋಶಿಯವರು ಆರಿಸಿಬಂದಿದ್ದಾರೆ. ಬೆಳಗಾಂ ತಾಲ್ಲೂಕಿನ ಹಿರೇಬಾಗೆವಾಡಿಯಿಂದ ನಾನು ಆರಿಸಿ ಬಂದಿದ್ದೇನೆ. ಆದರೆ ಮಹಾರಾಷ್ಟ್ರ ಏಕೀಕರಣ ಸಮತಿಯ ಮಹತ್ವ ಈಗಾಗಲೇ ಕಡಿಮೆಯಾಗುತ್ತಿದೆ. ನಾವು ಆರಿಸಿಬಂದವರು ಇಲ್ಲಿ ಸುಮ್ಮನೆ ಕುಳಿತಿದ್ದೇವೆ. ನಾವು ವಿಶೇಷವಾಗಿ ವಿಚಾರ ಮಾಡಿನೋಡಿದರೆ ವಾಟಾಳನಾಗರಾಜರವರು

ಅದಕ್ಕೆ ಸಂಬಂಧಪಡುವುದಿಲ್ಲ. ನಾವು ಆರಿಸಿಬಂದವರೆ ಸುಮ್ಮನೆ ಕುಳಿತಿದ್ದೇವೆ ಆದರೆ ಅವರಿಗೇ ಹೆಚ್ಚಾಗಿಬಿಟ್ಟಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇದು ಈ ರಾಜ್ಯದ ಎಲ್ಲರಿಗೂ ಸಂಬಂಧಪಟ್ಟಿದೆ.

ಅಧ್ಯಕ್ಷರು : ನೋಡಿ ಅವರು ಯಾವೊತ್ತು ಎದ್ದುನಿಂತು ಮಾತನಾಡಿಲ್ಲ. ಅವರ ಮಾತಿನ ಉದ್ದೇಶ ಏನೆಂದರೆ, ನಾವು ಅಲ್ಲಿಂದ ಬಂದವರು ನಮಗಿಂತ ಹೆಚ್ಚು ಕಾಳಜಿ ಅವರಿಗಿದೆ ಎಂದು ಅಷ್ಟೆ.....

(3) ಬೆಳಗಾವಿ ಜಿಲ್ಲೆಯಲ್ಲಿ ರೈತರು ಹೆಚ್ಚು ಕಬ್ಬು ಬೆಳೆದಿದ್ದುನ್ನು ಮಹಾರಾಷ್ಟ್ರಕ್ಕೆ ಸಾಗಿಸಲು ಪರವಾನಗಿ

ಶ್ರೀ ಚಂದ್ರಶೇಖರ್ ಸದಾಶಿವನಾಯಕ್ : ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಬೆಳಗಾವಿ ಜಿಲ್ಲೆಯಲ್ಲಿ ಅಧಿಕವಾಗಿ ಈ ವರ್ಷ ಕಬ್ಬನ್ನು ಬೆಳೆದದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಸರ್ಕಾರಕ್ಕೆ ಹೆಚ್ಚುವರಿಯಾಗಿರುವ ಕಬ್ಬಿನ ಬಗ್ಗೆ ಮನವಿಯನ್ನು ಸಲ್ಲಿಸಿದಾಗ ಮಹಾರಾಷ್ಟ್ರಕ್ಕೆ ಸಾಗಿಸಲಿಕ್ಕೆ ನಾವು ಪ್ರಯತ್ನ ಪಡುತ್ತೇವೆ ಎಂದು ಹೇಳಿದ್ದರು, ವಿರೋಧಪಕ್ಷದವರು ಈಗಾಗಲೇ ಮಹಾರಾಷ್ಟ್ರಕ್ಕೆ ಹೋಗಿಬಂದಿದ್ದಾರೆ. ಆದರೆ ನಮ್ಮ ಸಚಿವರು ಏಕೆ ಹೋಗಿಲ್ಲ ಎಂದು ಜನ ಸುಮ್ಮನೆ ಕೇಳುತ್ತಿದ್ದಾರೆ. ಆದಕ್ಕೆ ಈ ಬೆಳಗಾವಿ ಜಿಲ್ಲಾ ಶಾಸಕರ ಒಂದು ನಿಯೋಗವನ್ನು ಸಚಿವರ ನೇತೃತ್ವದಲ್ಲಿ ಏಕೆ ಕರೆದುಕೊಂಡು ಹೋಗಬಾರದು? ಈ ಕಬ್ಬಿನ ಸಮಸ್ಯೆಯನ್ನು ಏಕೆ ಬಗೆಹರಿಸಬಾರದು ಎಂಬ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಬಾಳಾಸಾಹೇಬ ಶ್ಯಾಮರಾವ್ ವಡ್ಡರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರಶೇಖರ ನಾಯಕರವರು ಏನು ಕೇಳಿದರು ಅದೇ ಪ್ರಶ್ನೆಯನ್ನು ನಾನೂ ಕೂಡ ಕೇಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಜನ ರೈತರು ಕಷ್ಟಪಟ್ಟು ಬೆಳೆಸಿದ್ದಾರೆ. ರೈತರು ಬೆಳಸಿರತಕ್ಕಂಥ ಕಬ್ಬನ್ನು ಜಿಲ್ಲೆಯಲ್ಲಿರುವಂಥ ಕಾರ್ಖಾನೆಗಳಿಂದ ಅರೆಯಲಿಕ್ಕೆ ಆಗುತ್ತಾ ಇಲ್ಲ. ಪ್ರತಿವರ್ಷ ಈ ಕಬ್ಬನ್ನು ನಮ್ಮ ನೆರೆರಾಜ್ಯವಾದ ಮಹಾರಾಷ್ಟ್ರದಲ್ಲಿರುವಂಥ ಸಕ್ಕರೆ ಕಾರ್ಖಾನೆಗಳಿಗೆ ಸಾಗಿಸಲಾಗುತ್ತಿತ್ತು. ಈ ವರ್ಷ ಸರ್ಕಾರ ಯಾವುದೋ ಒಂದು ನಿರ್ಬಂಧವನ್ನು ಹಾಕಿ ಈ ರೈತರ ಕಬ್ಬನ್ನು ತೆಗೆದುಕೊಂಡು ಹೋಗದೆ ಇರುವುದರಿಂದ ರೈತರು ನಿಜವಾಗಿಯೂ ಕಂಗಾಲಾಗಿದ್ದಾರೆ. ಈ ಬಗ್ಗೆ ನಾವು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಬೆಳಗಾಂವ್‌ಗೆ ಬಂದಂಥ ಸಂದರ್ಭದಲ್ಲಿ ಹೇಳಿದೆವು ಆಗ ಅವರು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು ಆದರೆ ಆ ಕ್ರಮ ಇನ್ನೂ ಕೃತಿಯಲ್ಲಿ ಬಂದಿಲ್ಲ. ಅದಕ್ಕೆ ಮುಖ್ಯಮಂತ್ರಿಗಳಾಗಲಿ, ಅಥವಾ ಸಕ್ಕರೆ ಖಾತೆಯ ಸಚಿವರಾಗಲಿ, ಬೆಳಗಾಂ ಜಿಲ್ಲೆಯ ಶಾಸಕರ ಒಂದು ನಿಯೋಗವನ್ನು ತೆಗೆದುಕೊಂಡುಹೋಗಿ ಮಹಾರಾಷ್ಟ್ರ ಸರ್ಕಾರದ ಜೊತೆ ಚರ್ಚಿಸಿ ಈ ರೈತರ ಕಷ್ಟವನ್ನು ಪರಿಹಾರ ಮಾಡುವಂಥ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.